ಶ್ರೀ ಎಸ್. ಆರ್. ಬೊಮ್ಮಾಯಿ.—ಬಹುತೇಕ ಮಂತ್ರಿಗಳು ಬಂದಿದ್ದೇವೆ. ೨-೩ ಮಂತ್ರಿಗಳು ಬಂದಿಲ್ಲ. ಸೋಮವಾರ ದಿವಸ ಆದಷ್ಟೂ ಹಾಜರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ೩೩ಳಿ ನೋಟೀಸ್ ನಮಗೆ ಹಿಂದಿನ ದಿವಸ ತಲುಪುವ ಹಾಗೆ ತಾವು ವ್ಯವಸ್ಥೆ ಮಾಡಬೇಕು ಇದರಿಂದಾಗಿ ನಮಗೆ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ,

ಶ್ರೀ ಎಸ್. ಬಂಗಾರಪ್ಪ.—ಬಹುಪಾಲು ಮಂತ್ರಿಗಳು ಇದ್ದಾರೆಂದು ಹೇಳಿದ್ದಾರೆ. ''ಕರಾಣ ಅಂಗಡಿಗೆ ಹೋಗಿ ಹೆಸರುಕಾಳು ಕೇಳಿದ್ದಕ್ಕೆ ಬೆಲ್ಲ ಬಹಳ ಚೆನ್ನಾಗಿದೆ ತೆಗೆದುಕೊಂಡು ಹೋಗಿ ಎಂದು ಹೇಳಿದರಂತೆ'' ಬೇರೆ ಮಂತ್ರಿಗಳು ಇದ್ದಾರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಮತ್ತೊಂದು ವಿಚಾರ. ''ತೊಗರಿ ಬೇಳೆ ಕೇಳಿದ್ದಕ್ಕೆ ಕಾಫಿಪುಡಿ ಚೆನ್ನಾಗಿದೆ ತೆಗೆದುಕೊಂಡು ಹೋಗಿ'' ಎಂದು ಹೇಳಿದಂತೆ ಆಗಿದೆ ಆದನ್ನು ತಾವು ಒಪ್ಪುತ್ತೀರಾ ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಶು ಸಂಗೋಪನಾ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಮೊನ್ನೆ ೩೩ಳಿನಲ್ಲಿ ಪ್ರಶ್ನೆ ಕೇಳಿದ್ದೆ, ಉತ್ತರ ಕೊಡುತ್ತೇನೆಂದು ಹೇಳಿದ್ದರು, ಉತ್ತರ ರೆಡಿ ಇದ್ದರೆ ಕೊಡುವುದಕ್ಕೆ ಹೇಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಕಳುಹಿಸಿದ್ದೇನೆ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ.—ಅಲ್ಲಿ ಮಿನುಗಾರರು ಬಹಳ ಸಂಕಷ್ಟದಲ್ಲಿದ್ದಾರೆ. ಅದಕ್ಕೆ ಉತ್ತರ ಬರಲಿಲ್ಲ. ಇದು ಬಹಳ ಭಯಂಕರವಾದ ಮುಖ್ಯವಾದ ವಿಚಾರವಾಗಿದೆ.

IV ಪಿ.ಯು.ಸಿ. ಪರೀಕ್ಷೆಯ ಫಲಿತಾಂಶದ ಬಗ್ಗೆ

ಶ್ರೀ ಕಲ್ಯಾಣರಾವ್ ಸಂಗಪ್ಪ ಮೊಳಕೇರಿ.—ಮಾನ್ಯ ಅಧ್ಯಕ್ಷರೇ, ಪಿ.ಯು.ಸಿ. ಬೋರ್ಡ್‌ನಿಂದ ಈ ವರ್ಷ ೧೯೮೫-೮೬ರ ಪಿ.ಯು.ಸಿ. ೨ನೇ ವರ್ಷದ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ತಿಳಿಸದಿದ್ದರಿಂದ ಕೆಲವು ವಿದ್ಯಾರ್ಥಿಗಳಿಗೆ ಮುಂದಿನ ಅಭ್ಯಾಸಕ್ಕೆ ತಡೆಯುಂಟಾಗಿದೆ. ಈ ವಿಳಂಬವು ಸಾರ್ವತ್ರಿಕವಾಗಿರುವುದು. ಈ ವಿಳಂಬದಿಂದ ದಾರಿ ತೋರದಂತಾಗಿರುವ ವಿದ್ಯಾರ್ಥಿಗಳ ಬಗ್ಗೆ ಸರಕಾರ ಹೊಣೆ ಹೊತ್ತು ವಿದ್ಯಾರ್ಥಿಗಳ ಫಲಿತಾಂಶವನ್ನು ತಕ್ಷಣ ಪ್ರಕಟಿಸಿ ಅಪರ ಈ ವರ್ಷದ ಮುಂದಿನ ಅಭ್ಯಾಸ ಮಾಡುವಂತೆ ಸಹಾಯ ಮಾಡಬೇಕು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀ ಡಿ. ಮಂಜುನಾಥ್ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಷಯವನ್ನು ಒಪ್ಪುತ್ತೇನೆ. ತಡವಾಗಿದೆ ನಿಜ. ಈಗಾಗಲೇ ಅವರಿಗೆ ಮುಂದಿನ ಪ್ರವೇಶಕ್ಕೆ ಸೇರುವುದಕ್ಕೆ ದಿನಾಂಕ ೨೩ರ ತನಕ ಸಮಯ ಕೊಟ್ಟಿದ್ದೇನೆ. ಈಗಾಗಲೇ ಬಹಳ ಜನ ಸೇರಿದ್ದಾರೆ.

ಶ್ರೀ ಕಲ್ಯಾಣರಾವ್ ಸಂಗಪ್ಪ ಮೊಳಕೇರಿ.—ಇನ್ನೂ ಫಲಿತಾಂಶ ಪ್ರಕಟಣೆಯಾಗಿಲ್ಲ.

ಶ್ರೀ ಜೆ.ಎಸ್. ಆಚಾರ್
(ಮಾನ್ಯ ಸದಸ್ಯರು ಗೈರುಹಾಜರು)
ಶ್ರೀ ಆರ್. ರಾಮಯ್ಯ
(ಮಾನ್ಯ ಸದಸ್ಯರು ಗೈರು ಹಾಜರು)

V ನಾಡಕಚೇರಿಗೆ ಹೆಚ್ಚು ಅಧಿಕಾರ ಕೊಡುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಾದ್ಯಂತ ೧೭೫ ನಾಡ ಆಫೀಸ್‌ಗಳನ್ನು ತೆರೆದಿದ್ದು ಅಲ್ಲಿದ್ದ ಆರ್.ಐ. ರವರನ್ನು ತೆಗೆದಿದ್ದೀರಿ. ಆದರಿಂದ ಸರಕಾರದ ಕೆಲಸ ನಾಡ ಆಫೀಸ್‌ನಲ್ಲಿ ಸುಗಮವಾಗಿ ಜರಗುವುದಿಲ್ಲ. ತಾಲ್ಲೂಕು ಆಫೀಸಿನಲ್ಲಿನ ಕೆಲವು ಕೆಲಸಗಳನ್ನು ಮಾತ್ರ ನಾಡ ಆಫೀಸಿಗೆ ಬದಲಾಯಿಸಿದ್ದೀರಿ, ಪೂರ್ತಿ ಅಧಿಕಾರವನ್ನು ಕೊಟ್ಟಿಲ್ಲ. ಇದರಿಂದ ಅನ್ಯಾಯವಾಗುತ್ತಿದೆ. ನಾಡ